ಸುದ್ದಿ ಸಿಂಚನ

ಅಡಕೆ ಮರಗಳನ್ನು ಕಡಿದ ಆರೋಪಿಗಳ ಬಂಧನ

ದಾವಣಗೆರೆ: ತಾಲೂಕಿನ ಬುಳ್ಳಾಪುರ ಗ್ರಾಮದಲ್ಲಿ 610 ಗಿಡಗಳನ್ನು ಕಡಿದು ನಾಶ ಮಾಡಿದ್ದ ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕ ಸೇರಿದಂತೆ ಇಬ್ಬರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.ದಾವಣಗೆರೆ ತಾಲೂಕಿನ ಆರ್.ಕಿರಣ (26) ಬಂಧಿತ ಪ್ರಮುಖ ಆರೋಪಿ. ಕಳೆದ ಜು.4ರಂದು ಬುಳ್ಳಾಪುರ ಗ್ರಾಮದ ಕೆ.ಸಿದ್ದೇಶನಾಯ್ಕ ಎಂಬುವರ 1 ಎಕರೆ 15 ಗುಂಟೆ ಜಮೀನಿನಲ್ಲಿ ಬೆಳೆದಿದ್ದ 660 ಅಡಿಕೆ ಮರಗಳ ಪೈಕಿ 610 ಮರಗಳನ್ನು ದುಷ್ಕರ್ಮಿಗಳು ಕಡಿದುಹಾಕಿರುವ ಬಗ್ಗೆ ಮಾಯಕೊಂಡ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಜೂಜು ಅಡ್ಡೆಗಳ ಮೇಲೆ ದಾಳಿ: 24 ಮಂದಿ ಸೆರೆ

ದಾವಣಗೆರೆ: ಜಿಲ್ಲೆಯ ವಿವಿಧ ಠಾಣೆಗಳ ವ್ಯಾಪ್ತಿಯಲ್ಲಿ 4 ಕಡೆ ನಡೆದ ದಾಳಿಗಳಲ್ಲಿ ಪೊಲೀಸರು ಒಟ್ಟು 24 ಮಂದಿ ಜೂಜುಕೋರರನ್ನು ಬಂಧಿಸಿ, 61,100 ರು. ನಗದು ಹಣವನ್ನು ವಶಪಡಿಸಿಕೊಂಡಿದ್ದಾರೆ. ಚನ್ನಗಿರಿ ತಾಲೂಕು ಸಂತೇಬೆನ್ನೂರು ಠಾಣೆ ವ್ಯಾಪ್ತಿಯ ಕಾಕನೂರು ಸಮೀಪದ ಹಳ್ಳದ ದಡದ ಬಳಿ ಜೂಜಾಡುತ್ತಿದ್ದ 6 ಜನರನ್ನು ಬಂಧಿಸಿ, 46,000 ರು. ವಶಪಡಿಸಿಕೊಳ್ಳಲಾಗಿದೆ. ಕೆಂಪನಹಳ್ಳಿ ಗ್ರಾಮದ ರಸ್ತೆ ಪಕ್ಕದಲ್ಲಿ ಜೂಜಾಟಡುತ್ತಿದ್ದ 6 ಜೂಜುಕೋರರನ್ನು ಬಂಧಿಸಿ, 4,150 ರು. ವಶಪಡಿಸಿಕೊಳ್ಳಲಾಗಿದೆ. ಚನ್ನಗಿರಿ ಠಾಣೆ ವ್ಯಾಪ್ತಿಯ ಗಾಳಿಹಳ್ಳಿ-ಮುದಿಗೇರೆ ರಸ್ತೆಯ ಪಕ್ಕದ ಸಾರ್ವಜನಿಕ ಸ್ಥಳದಲ್ಲಿ ಜೂಜಾಡುತ್ತಿದ್ದ 4 ಜನರನ್ನು ವಶಕ್ಕೆ ಪಡೆದು, 3,550 ರು. ನಗದು ಜಪ್ತು ಮಾಡಲಾಗಿದೆ. ದಾವಣಗೆರೆ ವಿದ್ಯಾನಗರ ಠಾಣಾ ವ್ಯಾಪ್ತಿಯ ರಾಮನಗರದಲ್ಲಿ 8 ಜನರನ್ನು ವಶಕ್ಕೆ ಪಡೆದು, 7,400 ರು. ಜಪ್ತಿ ಮಾಡಲಾಗಿದೆ.

18, 19ಕ್ಕೆ ಕರೋಕೆ ಗಾಯನ ಸ್ಪರ್ಧೆ, ಸನ್ಮಾನ

ದಾವಣಗೆರೆ: ಗಾನಸುಧೆ ಕಲಾಬಳಗ ಮತ್ತು ದಾವಣಗೆರೆ ಫ್ರೆಂಡ್ಸ್ ಮೆಲೋಡಿ ಆರ್ಕೆಸ್ಟ್ರಾದ 6ನೇ ವಾರ್ಷಿಕೋತ್ಸವದ ಅಂಗವಾಗಿ ರಾಜ್ಯ ಮಟ್ಟದ ಕರೋಕೆ ಗಾಯನ ಸ್ಪರ್ಧೆ, ಸಾಧಕರಿಗೆ ಸನ್ಮಾನ ಕಾರ್ಯಕ್ರಮವನ್ನು ಜು.18, 19 ರಂದು ಇಲ್ಲಿನ ಕುವೆಂಪು ಕನ್ನಡ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಗಾನಸುಧೆ ಕಲಾಬಳಗದ ಅಧ್ಯಕ್ಷ ಎನ್.ಮಂಜುನಾಥ ತಿಳಿಸಿದರು. ನಗರದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ರಾಜ್ಯದ ವಿವಿಧ ಭಾಗಗಳಲ್ಲಿನ ಅವಕಾಶ ವಂಚಿತರಿಗೆ ವೇದಿಕೆ ಕಲ್ಪಿಸುವ ಉದ್ದೇಶದಿಂದ ಈ ಸ್ಪರ್ಧೆ ನಡೆಸಲಾಗುತ್ತಿದೆ ಎಂದರು. ಬಳಗದ ಪ್ರಧಾನ ಕಾರ್ಯದರ್ಶಿ ಪರಮೇಶ್, ಹೆಚ್ಚಿನ ಮಾಹಿತಿಗೆ 8105711283, 9986620933, 9164565373 ಸಂಪರ್ಕಿಸುವಂತೆ ಕೋರಿದರು. ಬಳಗದ ರೂಪಾ, ಶೃತಿ, ಅನು, ಹಾಲೇಶ್ ಇದ್ದರು.

ಬಟ್ಟೆ ಬದಲಿಸೋ ವೀಡಿಯೋ ತೋರಿಸಿ ರೇಪ್

ಜಿಮ್ ಟ್ರೈನರ್ ಇಸ್ಮಾಯಿಲ್ ವಿರುದ್ಧ ಸಂತ್ರಸ್ತೆ ಆಕ್ರೋಶ | ನನ್ನ ಮೇಲೆ ಅತ್ಯಾಚಾರ ನಡೆಸಿದ ವೀಡಿಯೋ ತೋರಿಸಿ ಬ್ಲ್ಯಾಕ್‌ಮೇಲ್

• **ಕನ್ನಡಪ್ರಭ ವಾರ್ತೆ** ದಾವಣಗೆರೆ

ನನ್ನ ಬಳಿ ಆಕಾಂಕ್ಷ ಎಂಬ ಹಿಂದೂ ಹೆಸರನ್ನು ಹೇಳಿಕೊಂಡು ಜಿಮ್ ಟ್ರೈನರ್‌ಪರಿಚಯಿಸಿಕೊಂಡಿದ್ದ. ಜಿಮ್‌ನಲ್ಲಿ ಹಿಂದೂ ದೇವರುಗಳ ಫೋಟೋ ಇದ್ದವು. ತಾವು ಜಿಮ್ ನಲ್ಲಿ ಬಟ್ಟೆ ಬದಲಿಸುವ ವೀಡಿಯೋ ಮಾಡಿಕೊಂಡು, ಬ್ಲ್ಯಾಕ್ ಮೇಲ್ ಮಾಡಿದ್ದ. ಈಚೆಗಷ್ಟೇ ಆತ ಹಿಂದೂ ಅಲ್ಲ, ಹಿಂದೂ ಹೆಸರು ಹೇಳಿಕೊಂಡ ಟ್ರೈನರ್‌ಎಂ.ಇಸ್ಮಾಯಿಲ್ ಎಂದು ಹೇಳಿಕೊಂಡಿದ್ದ ಎಂದು ದಾವಣಗೆರೆಯ ಸಂತ್ರಸ್ತೆ ದೂರಿದರು.

ನಗರದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಒಂದೂವರೆ ವರ್ಷದಿಂದ ಫಿಟ್‌ನೆಸ್ ಜಿಮ್‌ಗೆ ಹೋಗುತ್ತಿದ್ದೆ. ಈಚೆಗಷ್ಟೇ ಜಿಮ್ ನಲ್ಲಿ ಡ್ರೆಸ್ ಚೇಂಜ್ ಮಾಡುವ ವಿಡಿಯೋ ರೆಕಾರ್ಡ್ ಮಾಡಿಕೊಂಡಿದ್ದ. ಅದನ್ನು ನನಗೆ ತೋರಿಸಿ, ನನ್ನ ಇಷ್ಟದಂತೆ ನೀನು ಇರಬೇಕು. ತಾನು ಕೇಳಿದಷ್ಟು ದುಡ್ಡು, ಬಂಗಾರ ನೀಡಬೇಕೆಂಬುದಾಗಿ ವೀಡಿಯೋ ತೋರಿಸಿ, ಬ್ಲ್ಯಾಕ್‌ಮೇಲ್ ಮಾಡಿದ್ದ ಎಂದರು.

ಜಿಮ್‌ನ ಸಿಸಿ ಕ್ಯಾಮೆರಾದ ಕೆಳಗೆ ನನ್ನ ಮೇಲೆ ಅತ್ಯಾಚಾರ ಮಾಡಿದ್ದು, ಆ ವೀಡಿಯೋ ಇಟ್ಟು ಕೊಂಡು ಬ್ಲ್ಯಾಕ್‌ಮೇಲ್ ಮಾಡುತ್ತಿದ್ದಾನೆ. 4 ಲಕ್ಷ ರು. ಹಣ ನೀಡುವಂತೆ, ಇಲ್ಲದಿದ್ದರೆ ವೀಡಿಯೋವನ್ನು ಸೋಷಿಯಲ್ ಮೀಡಿಯಾಗೆ ಹಾಕುವುದಾಗಿ ಬೆದರಿಸಿದ್ದ ಎಂದು ಆರೋಪಿಸಿದರು.

ಇಸ್ಮಾಯಿಲ್‌ನ ತಾಯಿ ತನ್ನ ವಿರುದ್ಧ ಹನಿಟ್ರ್ಯಾಪ್ ಆರೋಪ ಮಾಡಿದ್ದಾರೆ. ನನ್ನ ವೀಡಿಯೋವನ್ನು ನಾನೇ ಮಾಡಿಕೊಂಡು, ಹೇಗೆ ಬ್ಲ್ಯಾಕ್‌ಮೇಲ್ ಮಾಡುತ್ತೀನಿ? ನನ್ನದು ವಿದ್ಯಾವಂತರ, ಆರ್ಥಿಕ ಸ್ಥಿತಿವಂತವಾಗಿರುವ ಕುಟುಂಬ. ಜಿಮ್‌ನಲ್ಲಿ ಮೊಬೈಲ್‌ವೊಂದು ಕಳುವಾಗಿತ್ತಂತೆ. ಘಟನೆ ನಡೆದ ಮುನ್ನಾದಿನ, ಆ ದಿನ, ಮಾರನೆ ದಿನ ನಾನು ಮೂರೂ ದಿನ ಅಲ್ಲಿಗೆ ಹೋಗಿರಲಿಲ್ಲ. ನಾನು ಹೋದ ದಿನ ಖಾಲಿ ಪೇಪರ್‌ಮೇಲೆ ಎಲ್ಲರೂ ಸಹಿ ಮಾಡಿದ್ದಾರೆ ಎಂದರು.

ಇಸ್ಮಾಯಿಲ್ ತಾಯಿ ಮಾಧ್ಯಮಗಳ ಮುಂದೆ ಬಿಡುಗಡೆ ಮಾಡಿದ ಆಡಿಯೋ ನನ್ನದಲ್ಲ, ನನಗೆ 4.5 ಲಕ್ಷ ರು. ಕೊಟ್ಟಿದ್ದಾರೆಂಬ ಆರೋಪ ಮಾಡಿದ್ದಾರೆ. ಎಸ್ಸೆಸ್ ಹೈಟೆಕ್ ಆಸ್ಪತ್ರೆ ಬಳಿ ಹಣ ಕೊಟ್ಟಿದ್ದಾರೆಂಬ ಆರೋಪ ಮಾಡಿದ ಆತನ ತಾಯಿ ಸಾಕ್ಷ್ಯಗಳ ಸಮೇತ ಆರೋಪ ಮಾಡಲಿ. ಅವನ ತಾಯಿ ಜೊತೆಗೆ ನಾನು ಮಾತಾಡಿಯೇ ಇಲ್ಲ. ಬಹಳಷ್ಟು ಹೆಣ್ಣು ಮಕ್ಕಳಿಗೆ ಇಸ್ಮಾಯಿಲ್ ಇದೇ ರೀತಿ ಮಾಡಿದ್ದಾನೆ. ಹಲವಾರು ಹೆಣ್ಣು ಮಕ್ಕಳ ವೀಡಿಯೋ, ಫೋಟೋಗಳನ್ನು ಎಲ್ಲವೂ ಆತನ ಮೊಬೈಲ್‌ನಲ್ಲಿವೆ ಎಂದು ದೂರಿದರು.

ಶ್ರೀರಾಮ ಸೇನೆ ಜಿಲ್ಲಾಧ್ಯಕ್ಷ ಮಣಿ ಸರ್ಕಾರ್, ಆಲೂರು ರಾಜಶೇಖರ, ಶ್ರೀಧರ್, ಬಿ.ಸಾಗರ್, ವೆಂಕಟೇಶ ನಾಯ್ಕ, ರಘು ಇತರರು ಇದ್ದರು.

ದಾವಣಗೆರೆಯಲ್ಲಿ ಗುರುವಾರ ಜಿಮ್ ಟ್ರೈನರ್‌ನಿಂದ ಅತ್ಯಾಚಾರ ಸಂತ್ರಸ್ತೆ, ಶ್ರೀರಾಮ ಸೇನೆ ಜಿಲ್ಲಾಧ್ಯಕ್ಷ ಮಣಿ ಸರ್ಕಾರ್‌ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ರೇಪ್ ಕೇಸ್ ಬಗ್ಗೆ ಡಾ.ನಾಗಲಕ್ಷ್ಮಿ ಚಕಾರ ಎತ್ತಿಲ್ಲ

ಜಿಮ್ ಟ್ರೈನರ್‌ನಿಂದ ಅತ್ಯಾಚಾರಕ್ಕೊಳಗಾದ ಸಂತ್ರಸ್ಥ ಮಹಿಳೆ ದೂರು ನೀಡಿದ್ದರೂ ಎಲ್ಲಾ ಕಡೆಗೂ ಹೋಗುವ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮಿ ಚೌಧುರಿ ಈ ಬಗ್ಗೆ ಚಕಾರ ಎತ್ತದಿರುವುದನ್ನು ನೋಡಿದರೆ ಆಯೋಗದ ಅಧ್ಯಕ್ಷರು ಇದ್ದಾರೋ ಅಥವಾ ಕೋಮಾದಲ್ಲಿದ್ದಾರೋ ಗೊತ್ತಾಗುತ್ತಿಲ್ಲ ಎಂದು ಶ್ರೀರಾಮ ಸೇನೆ ಜಿಲ್ಲಾಧ್ಯಕ್ಷ ಮಣಿ ಸರ್ಕಾರ ಆಕ್ರೋಶ ವ್ಯಕ್ತಪಡಿಸಿದರು. ಜಿಮ್ ಟ್ರೈನರ್‌ಇಸ್ಮಾಯಿಲ್ ವಿರುದ್ಧ ಸಂತ್ರಸ್ತೆ ಪೊಲೀಸ್ ಠಾಣೆಗೆ ದೂರು ದಾಖಲಿಸಿ, ವೈದ್ಯಕೀಯ ತಪಾಸಣೆ ನಂತರ ನೇರವಾಗಿ ಮಾಧ್ಯಮಗಳ ಮುಂದೆ ಬಂದಿದ್ದಾರೆ. ಇದೊಂದೇ ಅಲ್ಲ, ಇಂತಹ ಹಲವಾರು ಪ್ರಕರಣಗಳಿದ್ದು, ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮಿಯವರ ಗಮನಕ್ಕೆ ಇದ್ಯಾವುದೂ ಬರುತ್ತಿಲ್ಲವೇ ಎಂದರು.

ಮೊದಲ ಸಲ ಜಿಮ್ ಕಾಮುಕನ ವಿರುದ್ಧ 376 ಕೇಸ್ ದಾಖಲಾಗಿದೆ. ಸಂತ್ರಸ್ತೆ ಫೋಟೋ, ಹೆಸರು ಬಹಿರಂಗಪಡಿಸಿದವರ ವಿರುದ್ಧ ಸೈಬರ್‌ಕ್ರೈಮ್ ಪೊಲೀಸ್ ಠಾಣೆಗೆ ದೂರು ನೀಡಲಾಗುವುದು. ಮಹಿಳಾ ಆಯೋಗಕ್ಕೂ ದೂರು ದಾಖಲಿಸಲಿದ್ದೇವೆ. ಪ್ರತಿ ಜಿಮ್, ಫಿಟ್ನೆಸ್ ಸೆಂಟರ್‌ಮುಂದೆ ಪೊಲೀಸ್ ಇಲಾಖೆ ಸಹಾಯವಾಣಿ, ಶ್ರೀರಾಮ ಸೇನೆ ಸಹಾಯವಾಣಿ ಸಂಖ್ಯೆ ಸಮೇತ ಫಲಕವನ್ನು ಪಾಲಿಕೆ ಅನುಮತಿ ಪಡೆದೇ, ಕಾನೂನುಬದ್ಧವಾಗಿ ಹಾಕುತ್ತೇವೆ.
• **ಮಣಿ ಸರ್ಕಾರ** ಜಿಲ್ಲಾಧ್ಯಕ್ಷ, ಶ್ರೀರಾಮ ಸೇನೆ

ಪುಟ್ಟರಾಜರಿಂದ ಜಗತ್ತೇ ಮೆಚ್ಚುವ ಸಾಧನೆ

ಸುಮತಿ ಜಯಪ್ಪ ಅಭಿಮತ | ಪುಟ್ಟರಾಜ ಸೇವಾ ಸಮಿತಿ ತೃತೀಯ ವಾರ್ಷಿಕೋತ್ಸವ | ವಚನ ಸ್ಪರ್ಧೆ

• **ಕನ್ನಡಪ್ರಭ ವಾರ್ತೆ** ದಾವಣಗೆರೆ

ಡಾ.ಪಂ.ಪುಟ್ಟರಾಜ ಸೇವಾ ಸಮಿತಿ ಮಹಿಳಾ ಘಟಕದ ತೃತೀಯ ವಾರ್ಷಿಕೋತ್ಸವ ಕಾರ್ಯಕ್ರಮದ ಅಂಗವಾಗಿ ವಚನ, ವಚನ ಲಿಖಿತ ಸ್ಪರ್ಧೆಯನ್ನು ಇಲ್ಲಿನ ಸದ್ಯೋಜಾತ ಶಿವಾಚಾರ್ಯ ಹಿರೇಮಠದ ಆವರಣದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಈ ಕಾರ್ಯಕ್ರಮದಲ್ಲಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷೆ, ಉಪನ್ಯಾಸಕಿ ಸುಮತಿ ಜಯಪ್ಪ ಮಾತನಾಡಿ, ಪಂಡಿತ ಪುಟ್ಟರಾಜ ಕವಿ ಗವಾಯಿಗಳು ಜಗತ್ತೇ ಮೆಚ್ಚುವಂತಹ ಸಾಧನೆ ಮಾಡಿದ್ದಾರೆ. ಅವರು ಧ್ಯಾನ, ಯೋಗ, ಇಷ್ಟಲಿಂಗ ಪೂಜೆ ಮಾಡುವ ಮೂಲಕ 97 ವರ್ಷಗಳ ಕಾಲ ಬದುಕಿದರು. ನಾವು ಅವರಂತೆ ಸಾಧನೆ ಮಾಡಲು ಆಗದೇ ಹೋದರೂ ಸಮಾಜಕ್ಕೆ ಸಣ್ಣ ಪ್ರಮಾಣದಲ್ಲಾದರೂ ಕೊಡುಗೆ ನೀಡಬೇಕು. ಮನೆಗಳಲ್ಲಿ ಹಿರಿಯರನ್ನು ಪೂಜ್ಯನೀಯ ಭಾವನೆಯಿಂದ ಕಾಣಬೇಕು. ಅವರು ತ್ರಿಭಾಷಾ ಪಂಡಿತರಾಗಿದ್ದು, ಸುಮಾರು 10ಕ್ಕೂ ಹೆಚ್ಚು ವಾದ್ಯಗಳನ್ನು ನುಡಿಸುತ್ತಿದ್ದರು. 20 ಸಾವಿರಕ್ಕೂ ಹೆಚ್ಚು ಅಂಧ, ಅನಾಥ, ದೀನದಲಿತರ ಮಕ್ಕಳಿಗೆ ಸಂಗೀತ ಕಲಿಸುವುದಲ್ಲದೇ ಪ್ರವಚನ ಮಾಡುವುದನ್ನು ಕಲಿಸಿಕೊಟ್ಟಿದ್ದರು ಎಂದರು.

ಸಮಿತಿ ಅಧ್ಯಕ್ಷೆ ಸೌಮ್ಯ ಸತೀಶ ಮಾತನಾಡಿ, ಪಂ.ಪುಟ್ಟರಾಜ ಕವಿ ಗವಾಯಿಗಳು ಅಂಧರಾಗಿದ್ದರೂ ಕೂಡಾ ಎಲ್ಲ ಜ್ಞಾನವನ್ನು ಪಡೆದವರಾಗಿದ್ದರು. ದಾವಣಗೆರೆ ಸೇರಿದಂತೆ ನಾಡಿನಾದ್ಯಂತ ವಿವಿಧ ಸ್ಥಳಗಳಲ್ಲಿ ಸಂಗೀತ ಶಾಲೆಗಳನ್ನು ತೆರೆದಿದ್ದಾರೆ ಎಂದರು.

ಸಮಾಜ ಸೇವಕರಾದ ಕಿರುವಾಡಿ ಗಿರಿಜಮ್ಮ, ನೀಲಗುಂದ ಜಯಮ್ಮ, ಸಮಿತಿ ರಾಜ್ಯಾಧ್ಯಕ್ಷ ಪಿ.ಬಿ.ವಿನಾಯಕ, ಜಿಲ್ಲಾ ಸಮಿತಿಯ ಪದಾಧಿಕಾರಿಗಳಾದ ಮಮತಾ ನಾಗರಾಜ, ಶೈಲಜಾ ಪಾಲಾಕ್ಷ, ಶಶಿಕಲಾ ರಮೇಶ, ಸುಮ ಕೊಟ್ರೇಶ, ಚಿನ್ನಮ್ಮ, ಸುಜಾತ ಬಸವರಾಜ, ಸುನಿತಾ, ಶಶಿಕಲಾ ವಾಲಿ, ಶಾಂತಾ ಶಿವಕುಮಾರ, ಉಮಾದೇವಿ, ಪೂಜಾ ಸುನಿಲ್, ಲಲಿತಾ ದಾಸಕರಿಯಪ್ಪ, ಸುಪ್ರೀತ್ ದಾರವಾಡ, ತೀರ್ಪುಗಾರರಾಗಿ ಸಂಗೀತ ಶಿಕ್ಷಕರಾದ ಕೆ.ಪಿ.ಮಂಗಳಗೌರಿ, ದಾಕ್ಷಾಯಿಣಿ ಮೂರ್ತಿ ಭಾಗವಹಿಸಿದ್ದರು.

ಗಾನಕೋಗಿಲೆ ಎಸ್.ಜಾನಕಿಯವರಿಗೆ ಸಮಿತಿಯಿಂದ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು.


ದಾವಣಗೆರೆಯಲ್ಲಿ ಡಾ.ಪಂ.ಪುಟ್ಟರಾಜ ಸೇವಾ ಸಮಿತಿ ವಾರ್ಷಿಕೋತ್ಸವ ನಡೆಯಿತು.

ನಾಳೆ ಜ್ಞಾನಪರ್ವ 2026-27 ಕಾರ್ಯಕ್ರಮ

ಚನ್ನಗಿರಿ: ಪಟ್ಟಣದ ಜ್ಞಾನದೀಪ ಎಕ್ಸ್‌ಪರ್ಟ್ ಪಿಯು ಕಾಲೇಜು ವತಿಯಿಂದ ಜ್ಞಾನಪರ್ವ 2026-27 ಎಂಬ ಕಾರ್ಯಕ್ರಮವನ್ನು ಜು.18ರ ಶನಿವಾರ ಪಟ್ಟಣದ ಎಲ್‌ಐಸಿ ಕಚೇರಿಯ ಬಳಿ ಇರುವ ಮಹರ್ಷಿ ವಾಲ್ಮೀಕಿ ಸಮುದಾಯ ಭವನದಲ್ಲಿ ಬೆಳಗ್ಗೆ 10.30ಕ್ಕೆ ಹಮ್ಮಿಕೊಳ್ಳಲಾಗಿದೆ ಎಂದು ಕಾಲೇಜಿನ ಪ್ರಾಚಾರ್ಯ ಆರ್.ಎಸ್.ಸುರೇಶ್ ತಿಳಿಸಿದ್ದಾರೆ.

ಯೂಟ್ಯೂಬ್‌ನವರು ನಕಲಿ ಪತ್ರಕರ್ತರಲ್ಲ: ದೇವರಾಜ್

• **ಕನ್ನಡಪ್ರಭ ವಾರ್ತೆ** ಹರಿಹರ

ಇತ್ತೀಚೆಗೆ ಕೆಲವು ಸಂಘಟನೆಗಳು ಯೂಟ್ಯೂಬ್ ಚಾನೆಲ್ ನಡೆಸುವವರನ್ನು ನಕಲಿ ಪತ್ರಕರ್ತರು ಎಂದು ಬಿಂಬಿಸಿ, ದೂರು ನೀಡಿ, ಗೊಂದಲ ಸೃಷ್ಟಿಸಲು ಪ್ರಯತ್ನಿಸುತ್ತಿದ್ದಾರೆ ಎಂದು ಆಪಾದಿಸಿ ಗುರುವಾರ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಧ್ವನಿ ಸಂಘಟನೆ ಘಟಕದ ಸದಸ್ಯರು ತಹಸೀಲ್ದಾರ್‌ಗೆ ಮನವಿ ಸಲ್ಲಿಸಿದರು.

ಮನವಿ ಸಲ್ಲಿಸಿ ಮಾತನಾಡಿದ ರಾಜ್ಯ ಸಂಚಾಲಕ ದೇವರಾಜ್ ಬಳಿಗಾರ್, ಡಿಜಿಟಲ್ ಮಾಧ್ಯಮಕ್ಕೆ ಕೇಂದ್ರ ಸರ್ಕಾರ ಮಾನ್ಯತೆ ನೀಡಿದ್ದು, ಡಿಜಿಟಲ್ ನ್ಯೂಸ್ ಪಬ್ಲಿಷರ್ಸ್ ಮತ್ತು ಯೂಟ್ಯೂಬ್ ಸುದ್ದಿಮಾಧ್ಯಮಗಳನ್ನು ಕಾನೂನಾತ್ಮಕವಾಗಿ ಗುರುತಿಸಲಾಗಿದೆ. ಯಾವುದೋ ಒಂದು ಪತ್ರಕರ್ತರ ಸಂಘಟನೆ ಮಾತ್ರ ಅಧಿಕೃತ ಎನ್ನುವುದು ತಪ್ಪಾಗಿ ಕಾಣುತ್ತದೆ ಎಂದರು.

ಪತ್ರಿಕಾ ಭವನ ಎಂದು ಅನುಮೋದನೆ ನೀಡಿ ಕೊಟ್ಟಂತಹ ಪತ್ರಿಕಾ ಭವನವನ್ನು ಕೇವಲ ಕಾರ್ಯನಿರತ ಪತ್ರಕರ್ತರ ಸಂಘಟನೆಯ ಸದಸ್ಯರು ಪತ್ರಿಕಾ ಭವನಕ್ಕೆ ತಮ್ಮ ಸಂಘಟನೆಯ ಹೆಸರನ್ನು ಅಳವಡಿಸಿಕೊಂಡು ಬೇರೆ ಯಾವ ಸಂಘಟನೆಯವರಿಗೂ ಪತ್ರಕರ್ತರಿಗೂ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಗೆ ಹಾಜರಾಗಲು ಅವಕಾಶ ನೀಡದೆ ತಮ್ಮ ಅಧಿಕಾರದ ದರ್ಪವನ್ನು ತೋರಿಸುತ್ತ ಅವಕಾಶ ವಂಚಿತರಾಗುವಂತೆ ಮಾಡುತ್ತಿದ್ದಾರೆ ಎಂದು ದೂರಿದರು.

ತಾಲೂಕು ಉಪಾಧ್ಯಕ್ಷ ಆರ್. ಶ್ರೀನಿವಾಸ್, ತಾಲೂಕು ಘಟಕದ ಉಪಾಧ್ಯಕ್ಷ ಎಸ್.ಆರ್.ಕಣವಿ, ಕಾರ್ಯದರ್ಶಿ ಎಲ್, ತಿಪ್ಪೇಶ್, ಸದಸ್ಯರು ಭಾಗವಹಿಸಿದ್ದರು.

ಹರಿಹರದಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಧ್ವನಿ ಸಂಘಟನೆ ಘಟಕದ ಸದಸ್ಯರು ತಹಸೀಲ್ದಾರ್‌ಗೆ ಮನವಿ ಸಲ್ಲಿಸಿದರು.

IIFL FINANCE
CIN: L67100MH1995PLC093797
Regd. Office: IIFL House, Sun Infotech Park, Road No. 16V, Plot No.B-23, Thane Industrial Area, Wagle Estate, Thane - 400604
Tel: (91-22) 41035000 • Fax: (91-22) 25806654
E-mail: reach@iifl.com • Website: www.iifl.com

ಚಿನ್ನದ ಆಭರಣಗಳ ಹರಾಜಿನ ಸಾರ್ವಜನಿಕ ಪ್ರಕಟಣೆ

ನಾವು, ಐಐಎಫ್‌ಎಲ್ ಫೈನಾನ್ಸ್ ಲಿಮಿಟೆಡ್ ("IIFL") ತಮ್ಮ ಸಾಲವನ್ನು ಕ್ರಮಬದ್ಧಗೊಳಿಸದ ಅಥವಾ ಬಾಕಿ ಇರುವ ಮೊತ್ತವನ್ನು ಪಾವತಿಸದ ಡೀಫಾಲ್ಟ್ ಮಾಡಿದ ಗ್ರಾಹಕರ ಚಿನ್ನದ ಆಭರಣಗಳನ್ನು ಹರಾಜು ಮಾಡುತ್ತಿದ್ದೇವೆ ಎಂದು ನಿರ್ದಿಷ್ಟವಾಗಿ ಮತ್ತು ಸಾರ್ವಜನಿಕರಿಗೆ ಈ ಮೂಲಕ ಎಲ್ಲಾ ಸಂಬಂಧಪಟ್ಟ ಸಾಲಗಾರರಿಗೆ ಸೂಚಿಸಲಾಗಿದೆ. ನೋಂದಾಯಿತ ಹರಾಜು ಸೂಚನೆಗಳು ಮತ್ತು ಪುನರಾವರ್ತಿತ ಜ್ಞಾಪನೆಗಳ ಮೂಲಕ ತಿಳಿಸಲಾಗಿದೆ. ಈ ಕೆಳಗಿನ ಸಾಲ ಖಾತೆಗಳಲ್ಲಿ ಆಡವು ಇರಿಸಲಾದ ಚಿನ್ನದ ಆಭರಣಗಳ ಸಾರ್ವಜನಿಕ ಏಲಂ ಅನ್ನು **18.08.2026** ರಂದು ಬೆಳಗ್ಗೆ ಗಂಟೆ 10 ರಿಂದ ಈ ಕೆಳಗಿನ ಜಿಲ್ಲಾ ಕೇಂದ್ರಗಳಲ್ಲಿ ನಡೆಸಲಾಗುತ್ತದೆ **ದಾವಣಗೆರೆ-ಜಯದೇವ ವೃತ್ತದ ರಸ್ತೆ ಜಿಎಲ್ - #273-13-14, ಶ್ರೀ ಮಲ್ಲಿಕಾರ್ಜುನ ಟವರ್ಸ್, 1ನೇ ಮಹಡಿ, ಸರಸ್ವತ್ ಬ್ಯಾಂಕ್ ಮೇಲೆ, ಜಯದೇವ ಸರ್ಕಲ್ ರಸ್ತೆ, ದಾವಣಗೆರೆ - 577002. ಕರ್ನಾಟಕ** ಅಥವಾ ದಿನಾಂಕದಲ್ಲಿನ ಯಾವುದೇ ಬದಲಾವಣೆಯನ್ನು (ಏನಾದರೂ ಇದ್ದರೆ) ಏಲಂನ ಕೇಂದ್ರದಲ್ಲಿ ದರ್ಶಿಸಲಾಗುತ್ತದೆ. ಯಾವುದೇ ಕಾರಣಕ್ಕಾಗಿ ಒಂದು ವೇಳೆ ಇಲ್ಲಿ ನಮೂದಿಸಲಾದ ದಿನಾಂಕದಂದು ಏಲಂ ನಡೆಸಲು ಸಾಧ್ಯವಾಗದಿದ್ದರೆ ಅಥವಾ ಅದೇ ದಿನ ಏಲಂ ಮುಗಿಯದಿದ್ದರೆ, ಅವೇ ನಿಯಮಗಳು ಮತ್ತು ಪರತ್ತುಗಳೊಂದಿಗೆ ನಂತರದ ಯಾವುದೇ ದಿನಾಂಕದಂದು ಸದರಿ ಏಲಂ ಅನ್ನು ನಡೆಸುವ ಅಥವಾ ಮುಂದುವರಿಸುವ ಹಕ್ಕನ್ನು ಐಐಎಫ್‌ಎಲ್ ಕಾದಿರಿಸಿಕೊಂಡಿದೆ. ಗ್ರಾಹಕರು ಮರಣಹೊಂದಿದರೆ, ಹರಾಜಿಗೆ ಸಂಬಂಧಿಸಿದ ಎಲ್ಲಾ ಷರತ್ತುಗಳು ನಾಮನಿರ್ದೇಶಿತ/ಕಾನೂನುಬದ್ಧ ಉತ್ತರಾಧಿಕಾರಿಗಳಿಗೆ ಅನ್ವಯವಾಗುತ್ತವೆ.

ಚಿನ್ನದ ಸಾಲದ ಖಾತೆ ಸಂಖ್ಯೆ: GL37141926, GL44462558, GL42357552, GL42626427, GL38570569, GL43003161, GL39101448, GL37156359, GL40956815, GL38500402, GL37341745, GL42626793, GL39026165, GL37862676, GL38149012, GL40956614, GL38374234, GL38928298, GL40956479, GL38149103, GL44236368, GL41052431, GL42217653, GL43314293, GL41060651, GL48906419, GL45976061, GL42631396, GL